॥ಶ್ರೀಹರಿಃ॥

# ॥ ಹಂತ 1 – ಶ್ರೀಮದ್ಭಗವದ್ಗೀತೆಯ ಶುದ್ಧ ಉಚ್ಚಾರಣಾ ಮಾರ್ಗದರ್ಶಿ ॥

**(ಈ ಮಾರ್ಗದರ್ಶಿಯನ್ನು ಪ್ರಾಥಮಿಕ ಹಂತದ ಭಗವದ್ಗೀತಾ ಪ್ರಶಿಕ್ಷಣಾರ್ಥಿಗಳಿಗಾಗಿ ಸಿದ್ಧಪಡಿಸಲಾಗಿದೆ)**

## ಹ್ರಸ್ವ. ಮತ್ತು ದೀರ್ಘ ಉಚ್ಚಾರಣಾ ನಿಯಮಗಳು:

- ಹ್ರಸ್ವ. **ಅ, ಇ, ಉ, ಋ, ಎ, ಒ** ಈ ಅಕ್ಷರಗಳ ಉಚ್ಚಾರಣೆಯನ್ನು ಹ್ರಸ್ವ.ವಾಗಿ (ಒಂದು ಮಾತ್ರೆಯ ಕಾಲದಲ್ಲಿ) ಮಾಡಬೇಕು, ದೀರ್ಘ ಅಲ್ಲ.
- ದೀರ್ಘ **ಆ, ಈ, ಊ, ಏ, ಐ, ಓ, ಔ** ಈ ಅಕ್ಷರಗಳ ಉಚ್ಚಾರಣೆಯನ್ನು ದೀರ್ಘವಾಗಿ (ಎರಡು ಮಾತ್ರೆಯ ಕಾಲದಲ್ಲಿ) ಮತ್ತೆ ಹ್ರಸ್ವ ಎಂದಾಗಿದೆ.

## ಅನುಸ್ವಾರ ಉಚ್ಚಾರಣಾ ನಿಯಮಗಳು:

- ಅನುಸ್ವಾರ – ಇದು ಸ್ವರವನ್ನು ಅನುಸರಿಸುವ ಅಕ್ಷರವಾಗಿದೆ. ಅಂದರೆ ಸ್ವರದ ನಂತರ ಬರುವ ಅಕ್ಷರವಾಗಿದೆ ಮತ್ತು ಈ ಅಕ್ಷರವನ್ನು ಮೂಗಿನಿಂದ ಉಚ್ಚರಿಸಲಾಗುತ್ತದೆ.
- ಅನುನಾಸಿಕ – ಇವು ಬಾಯಿ ಮತ್ತು ಮೂಗಿನೊಂದಿಗೆ ಉಚ್ಚರಿಸುವ ವರ್ಣಗಳು.
- ಅನುಸ್ವಾರದ ಉಚ್ಚಾರಣೆಯು ಅದರ ಮುಂದಿನ ಅಕ್ಷರವನ್ನು ಅವಲಂಬಿಸಿರುತ್ತದೆ ಅಂದರೆ, ಅನುಸ್ವಾರದ ಉಚ್ಚಾರವು ಅದರ ಮುಂದಿನ ವರ್ಣಕ್ಕೆ ಅನುಗುಣವಾಗಿ ಬದಲಾಗುತ್ತದೆ.

### ಕ ವರ್ಗ

- **ಕ್, ಖ್, ಗ್, ಘ್, ಙ್** ಇವು ಕಂಠ್ಯ ವರ್ಣಗಳು, ಇವುಗಳನ್ನು ಕಂಠದಿಂದ ಉಚ್ಚರಿಸಲಾಗುತ್ತದೆ.
- ಈ ವರ್ಗದ ಅನುನಾಸಿಕ ಅಕ್ಷರ **'ಙ್'** ಇದೆ, ಆದ್ದರಿಂದ ಈ ವರ್ಗದ ಅಕ್ಷರಗಳ ಮೊದಲು ಬರುವ ಅನುಸ್ವಾರವನ್ನು **'ಙ್'** ಎಂದು ಉಚ್ಚರಿಸಬೇಕು.
  ಉದಾ - **ಕಂಕಣ (ಕಙ್ಕಣ), ಪಂಖ (ಪಙ್ಖ), ಗಂಗಾ (ಗಙ್ಗಾ), ಸಂಘ (ಸಙ್ಘ)**
- **'ಕ್ಷ'** ಸಂಯುಕ್ತ ವರ್ಣವಾಗಿದೆ, **(ಕ್+ಷ=ಕ್ಷ).** ಇದರಲ್ಲಿ **'ಕ್'** ಮೊದಲನೆಯ ವರ್ಣವಾಗಿದೆ. ಆದ್ದರಿಂದ **'ಕ್ಷ'** ಅಕ್ಷರದ ಮೊದಲು ಬರುವ ಅನುಸ್ವಾರವನ್ನು **'ಙ್'** ಎಂದು ಉಚ್ಚರಿಸಬೇಕು.
  ಉದಾ - **ಸಂಕ್ಷಿಪ್ತ (ಸಙ್ಕ್ಷಿಪ್ತ)**

## ಚ ವರ್ಗ

- **ಚ್, ಛ್, ಜ್, ಝ್, ಞ್** ಇವು ತಾಲವ್ಯ(ಅಂಗುಳ) ವರ್ಣಗಳು, ಇವುಗಳನ್ನು ಅಂಗುಳದಿಂದ ಉಚ್ಚರಿಸಲಾಗುತ್ತದೆ.
- ಈ ವರ್ಗದ ಅನುನಾಸಿಕ ಅಕ್ಷರ **'ಞ್'** ಇದೆ, ಆದ್ದರಿಂದ ಈ ವರ್ಗದ ಅಕ್ಷರಗಳ ಮೊದಲು ಬರುವ ಅನುಸ್ವಾರವನ್ನು **'ಞ್'** ಎಂದು ಉಚ್ಚರಿಸಬೇಕು.

  ಉದಾ - **ಚಂಚಲ (ಚಞ್ಚಲ), ಪಂಛೀ (ಪಞ್ಛೀ), ಪಂಜಾ (ಪಞ್ಜಾ), ರಾಂಝಾ (ರಾಞ್ಝಾ)**
- **'ಜ್ಞ'** ಸಂಯುಕ್ತ ವರ್ಣವಿದೆ **(ಜ್+ಞ್= ಜ್ಞ)**, ಇದರಲ್ಲಿ **'ಜ್'** ಮೊದಲನೆಯ ವರ್ಣವಾಗಿದೆ, ಆದ್ದರಿಂದ **'ಜ್ಞ'** ಅಕ್ಷರದ ಮುಂದೆ ಬರುವ ಅನುಸ್ವಾರವನ್ನು **'ಞ್'** ಎಂದು ಉಚ್ಚರಿಸಬೇಕು.

  ಉದಾ – **ಇದಂ+ಜ್ಞಾನಮ್ = ಇದಂ(ಞ್)ಜ್ಞಾನ**

## ಟ ವರ್ಗ

- **ಟ್, ಠ್, ಡ್, ಢ್, ಣ್** ಇವು ಮೂರ್ಧನ್ಯ ವರ್ಣಗಳು, ಇವುಗಳನ್ನು ಮೂರ್ಧಭಾಗದಿಂದ ಉಚ್ಚರಿಸಲಾಗುತ್ತದೆ.
- ಈ ವರ್ಗದ ಅನುನಾಸಿಕ **ಅಕ್ಷರ 'ಣ್'** ಇದೆ, ಆದ್ದರಿಂದ ಈ ವರ್ಗದ ಅಕ್ಷರಗಳ ಮೊದಲು ಬರುವ ಅನುಸ್ವಾರವನ್ನು **'ಣ್'** ಎಂದು ಉಚ್ಚರಿಸಬೇಕು.

  ಉದಾ - **ಘಂಟಾ (ಘಣ್ಟಾ), ಕಂಠ (ಕಣ್ಠ), ಪಂಡಿತ (ಪಣ್ಡಿತ), ಷಂಢ (ಷಣ್ಢ)**

## ತ ವರ್ಗ

- **ತ್, ಥ್, ದ್, ಧ್, ನ್** ಇವು ದಂತ್ಯ ವರ್ಣಗಳು. ಇವುಗಳನ್ನು ದಂತದಿಂದ ಉಚ್ಚರಿಸಲಾಗುತ್ತದೆ.
- ಈ ವರ್ಗದ ಅನುನಾಸಿಕ ಅಕ್ಷರ **'ನ್'** ಇದೆ, ಆದ್ದರಿಂದ ಈ ವರ್ಗದ ಅಕ್ಷರಗಳ ಮೊದಲು ಬರುವ ಅನುಸ್ವಾರವನ್ನು **'ನ್'** ಎಂದು ಉಚ್ಚರಿಸಬೇಕು.

  ಉದಾ - **ಪಂತ (ಪನ್ತ), ಪಂಥ (ಪನ್ಥ), ಕಂದ (ಕನ್ದ), ಅಂಧ (ಅನ್ಧ)**
- **'ತ್ರ'** ಸಂಯುಕ್ತ ವರ್ಣವಿದೆ **(ತ್+ರ=ತ್ರ)**, ಇದರಲ್ಲಿ **'ತ್'** ಮೊದಲನೆಯ ವರ್ಣವಾಗಿದೆ, ಆದ್ದರಿಂದ **'ತ್ರ'** ಅಕ್ಷರದ ಮೊದಲು ಬರುವ ಅನುಸ್ವಾರವನ್ನು **'ನ್'** ಎಂದು ಉಚ್ಚರಿಸಬೇಕು.

  ಉದಾ - **ತಂತ್ರ (ತನ್ತ್ರ)**

## ಪ ವರ್ಗ

- **ಪ್, ಫ್, ಬ್, ಭ್, ಮ್** ಇವು ಓಷ್ಠ್ಯ(ತುಟಿ) ವರ್ಣಗಳು, ಇವುಗಳನ್ನು ತುಟಿಯಿಂದ ಉಚ್ಚರಿಸಲಾಗುತ್ತದೆ.
- ಈ ವರ್ಗದ ಅನುನಾಸಿಕ **'ಮ್'** ಇದೆ, ಆದ್ದರಿಂದ ಈ ವರ್ಗದ ಅಕ್ಷರಗಳ ಮೊದಲು ಬರುವ ಅನುಸ್ವಾರ ಉಚ್ಚಾರಣೆ **'ಮ್'** ಹಾಗೆ ಮಾಡಬೇಕು.

  ಉದಾ - **ಚಂಪಾ (ಚಮ್ಪಾ), ಈಂಫಾಲ (ಈಮ್ಫಾಲ), ಸಂಬಲ (ಸಮ್ಬಲ), ದಂಭ (ದಮ್ಭ)**

## ವಿಶೇಷ ವರ್ಗ

**'ಕ'** ದಿಂದ **'ಪ'** ವರ್ಗದವರೆಗಿನ ಎಲ್ಲಾ ವ್ಯಂಜನಗಳ ಮುಂದೆ ಬರುವ ಅನುಸ್ವಾರವನ್ನು ಹೇಗೆ ಉಚ್ಚರಿಸಬೇಕೆಂದು ನಾವು ನೋಡಿದ್ದೇವೆ. ಈಗ **'ಯ'** ದಿಂದ **'ಹ'** ವರೆಗಿನ ಎಲ್ಲಾ ವರ್ಣಗಳ ನಂತರ ಬರುವ ಅನುಸ್ವಾರವನ್ನು ಹೇಗೆ ಉಚ್ಚರಿಸಬೇಕೆಂದು ನೋಡೋಣ. ಉಚ್ಚಾರವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವ ಸಲುವಾಗಿ ಆ ಅಕ್ಷರಗಳನ್ನು ಆವರಣದಲ್ಲಿ ಬರೆಯಲಾಗಿದೆ. ನೆನಪಿಡಿ, ವಾಸ್ತವದಲ್ಲಿ ಈ ವರ್ಣಗಳು ಅಲ್ಲಿ ಇರುವುದಿಲ್ಲ. ಪ್ರಾಥಮಿಕ ಹಂತದಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಸುಲಭವಾಗಿ ಮತ್ತು ಸ್ಪಷ್ಟವಾಗಿ ಅರ್ಥೈಸಿಕೊಳ್ಳುವ ಸಲುವಾಗಿ ಮಾತ್ರ ಅನುಸ್ವಾರದ ಉಚ್ಚಾರವನ್ನು ಇಲ್ಲಿ ನೀಡಲಾಗಿದೆ.

### ಪದಗಳ ಮಧ್ಯೆಯಿರುವ ಅನುಸ್ವಾರಯುಕ್ತ ವರ್ಣದ ನಂತರ ಬರುವ 'ಯ' ನಿಂದ 'ಹ' ದವರೆಗಿನ ವರ್ಣಗಳ ಉಚ್ಚಾರಕ್ಕೆ ಉದಾಹರಣೆಗಳು

ಪದಗಳ ಮಧ್ಯದಲ್ಲಿ ಬರುವ **'ಯ'** ದಿಂದ **'ಹ'** ದವರೆಗಿನ ಅಕ್ಷರಗಳ ಮೊದಲು ಅನುಸ್ವಾರಯುಕ್ತ ಅಕ್ಷರ ಬಂದಾಗ, ಆ ಅನುಸ್ವಾರವನ್ನು ಅನುನಾಸಿಕ **'ಯ್', 'ಲ್'** ಅಥವಾ **'ವ್'** ಎಂದು ಉಚ್ಚರಿಸಲಾಗುತ್ತದೆ.

- **ಯ** - ಸಂಯಮ [ಸಂ(ಯ್)ಯಮ], ಸಂಯೋಗಿತಾ [ಸಂ(ಯ್)ಯೋಗಿತಾ], ಸಂಯುಕ್ತ [ಸಂ(ಯ್)ಯುಕ್ತ]
- **ಲ** - ಸಂಲಗ್ನ [ಸಂ(ಲ್)ಲಗ್ನ], ಸಂಲಾಪ [ಸಂ(ಲ್)ಲಾಪ]
- **ವ** - ಸಂವಾದ [ಸಂ(ವ್)ವಾದ], ಸಂವರ್ಧನ [ಸಂ(ವ್)ವರ್ಧನ], ಸಂವೇದನಾ [ಸಂ(ವ್)ವೇದನಾ]
- **ರ** - ಸಂರಚನಾ [ಸಂ(ವ್)ರಚನಾ], ಸಂರಕ್ಷನ [ಸಂ(ವ್)ರಕ್ಷನ], ಸಂರೇಖನ [ಸಂ(ವ್)ರೇಖನ]
- **ಶ/ಷ** - ಸಂಶಯ [ಸಂ(ವ್)ಶಯ], ವಂಶ [ವಂ(ವ್)ಶ], ದಂಶ [ದಂ(ವ್)ಶ], ದಂಷ್ಟ್ರಾ [ದಂ(ವ್)ಷ್ಟ್ರಾ], ಸಂಶ್ರಯ [ಸಂ(ವ್)ಶ್ರಯ]
- **ಸ** - ಕಂಸ [ಕಂ(ವ್)ಸ], ಸಂಸಾರ [ಸಂ(ವ್)ಸಾರ], ಸಂಸರ್ಗ [ಸಂ(ವ್)ಸರ್ಗ]
- **ಹ** - ಸಿಂಹ [ಸಿಂ(ವ್)ಹ], ಸಂಹಾರ [ಸಂ(ವ್)ಹಾರ], ಸಂಹಿತಾ [ಸಂ(ವ್)ಹಿತಾ]

### ಪದದ ಕೊನೆಯಲ್ಲಿ ಬರುವ ಅನುಸ್ವಾರಯುಕ್ತ ವರ್ಣದ ನಂತರ ಬರುವ 'ಯ' ದಿಂದ 'ಹ' ದವರೆಗಿನ ವರ್ಣಗಳ ಉಚ್ಚಾರಕ್ಕೆ ಉದಾಹರಣೆಗಳು

ಪದಗಳ ಕೊನೆಯಲ್ಲಿ ಬರುವ ಅನುಸ್ವಾರಯುಕ್ತ ವರ್ಣದ ನಂತರ **'ಯ'** ದಿಂದ **'ಹ'** ದವರೆಗಿನ ಅಕ್ಷರಗಳು ಬಂದಾಗ ಆ ಅನುಸ್ವಾರವನ್ನು ಎಂದು ಉಚ್ಚರಿಸಲಾಗುತ್ತದೆ.

- **ಯ** - ಧರ್ಮ್ಯಾಮೃತಮಿದಂ(ಯ್) ಯಥೋಕ್ತಮ್
- **ರ** - ಲೋಕಮಿಮಂ(ಮ್) ರವಿಃ
- **ಲ** – ತದೋತ್ತಮವಿದಾಂ(ಲ್) ಲೋಕಾನ್
- **ವ** - ಧ್ಯಾನಂ(ವ್) ವಿಶಿಷ್ಯತೆ
- **ಶ/ಷ** - ಇದಂ(ಮ್) ಶರೀರಮ್
- **ಸ** - ಏವಂ(ಮ್) ಸತತ
- **ಹ** - ಕ್ಷಯಂ(ಮ್) ಹಿಂಸಾಮ

## ವಿಸರ್ಗ ಉಚ್ಚಾರಣಾ ನಿಯಮಗಳು:

### ನಿಯಮ 1 : ಸಾಲಿನ ಕೊನೆಯಲ್ಲಿ ಬರುವ ವಿಸರ್ಗದ ಉಚ್ಚಾರಣೆಗಳು :

ವಿಸರ್ಗವು ಕೂಡಾ ಸ್ವರದ ನಂತರವೇ ಬರುತ್ತದೆ. ಭಗವದ್ಗೀತೆಯ ಹೆಚ್ಚಿನ ಎಲ್ಲಾ ಶ್ಲೋಕಗಳ ಕೊನೆಯಲ್ಲಿ ಬರುವ ವಿಸರ್ಗಗಳನ್ನು **'ಹ್'** ಎಂದು ಉಚ್ಚರಿಸಲಾಗುತ್ತದೆ. ವಿಸರ್ಗದ ಮೊದಲು ಯಾವ ಸ್ವರಗಳಿವೆ ಎಂಬ ಆಧಾರದ ಮೇಲೆ ಇದನ್ನು **ಹ, ಹಿ, ಹು, ಹೇ** ಇತ್ಯಾದಿಗಳಾಗಿ ಉಚ್ಚರಿಸಲಾಗುತ್ತದೆ.

**ಉದಾಹರಣೆಗಳು - ವಿಸರ್ಗದ ಮೊದಲಿನ ಸ್ವರ -**

- ಒಂದು ವೇಳೆ 'ಅ' ಆಗಿದ್ದರೆ, ವಿಸರ್ಗವನ್ನು **'ಹ/ಹಾ'** ಎಂದು ಉಚ್ಚರಿಸಲಾಗುತ್ತದೆ.
  ಉದಾ. - **ಸಂಶಯಃ - ಸಂಶಯಹ/ಸಂಶಯಹಾ**
- ಒಂದು ವೇಳೆ 'ಆ' ಆಗಿದ್ದರೆ, ವಿಸರ್ಗವನ್ನು **ಹಾ'** ಎಂದು ಉಚ್ಚರಿಸಲಾಗುತ್ತದೆ.
  ಉದಾ. - **ರತಾಃ -ರತಾಹಾ.**
- ಒಂದು ವೇಳೆ 'ಇ', 'ಈ', 'ಐ' ಆಗಿದ್ದರೆ, ವಿಸರ್ಗವನ್ನು **'ಹಿ'** ಎಂದು ಉಚ್ಚರಿಸಲಾಗುತ್ತದೆ.
  ಉದಾ. - **ಮತಿಃ - ಮತಿಹಿ, ಧರ್ಮೈಃ - ಧರ್ಮೈಹಿ**
- ಒಂದು ವೇಳೆ 'ಉ', 'ಊ', 'ಔ' ಇದ್ದರೆ ಆಗ ವಿಸರ್ಗವನ್ನು **'ಹು'** ಎಂದು ಉಚ್ಚರಿಸಲಾಗುತ್ತದೆ.
  ಉದಾ. - **ಕುರುಃ - ಕುರುಹು, ಗೌಃ - ಗೌಹು**
- ಒಂದು ವೇಳೆ 'ಎ', 'ಏ' ಇದ್ದರೆ ಆಗ ವಿಸರ್ಗವನ್ನು **'ಹೆ'** ಎಂದು ಉಚ್ಚರಿಸಲಾಗುತ್ತದೆ.
  ಉದಾ. - **ಭೂಮೇಃ - ಭೂಮೆಹೆ**
- ಒಂದು ವೇಳೆ 'ಒ', 'ಓ' ಇದ್ದರೆ ಆಗ ವಿಸರ್ಗವನ್ನು **'ಹೋ'** ಎಂದು ಉಚ್ಚರಿಸಲಾಗುತ್ತದೆ.
  ಉದಾ. - **ಮಾನಾಪಮಾನಯೋಃ – ಮಾನಾಪಮಾನಯೋಹೋ**

### ನಿಯಮ 2 : ಕೆಲವು ವಿಶಿಷ್ಟ ವರ್ಣಗಳ ಮೊದಲು ಬರುವ ವಿಸರ್ಗದ ಉಚ್ಚಾರಣೆ :

ಎರಡು ಪದಗಳ ನಡುವೆ ವಿಸರ್ಗ ಬಂದರೆ, ಆ ವಿಸರ್ಗದ ಮುಂದಿನ ಅಕ್ಷರಕ್ಕನುಗುಣವಾಗಿ ವಿಸರ್ಗವನ್ನು ಉಚ್ಚರಿಸಲಾಗುತ್ತದೆ.

- ಒಂದು ವೇಳೆ ವಿಸರ್ಗದ ನಂತರ **'ಕ್'** ಅಥವಾ **'ಖ್'** ಅಕ್ಷರ ಬಂದರೆ, ಆ ವಿಸರ್ಗವನ್ನು ಒಂದು ತರಹ **'ಖ್'** ಎಂಬ ರೀತಿಯಲ್ಲಿ ಉಚ್ಚರಿಸಬೇಕು. ಇಲ್ಲಿ ನೆನಪಿಡಿ, ಉಚ್ಚಾರಣೆಯನ್ನು **'ಖ್'** ತರಹ ಮಾಡಬೇಕೆ ವಿನಃ **'ಖ್'** ಎಂಬುದಾಗಿ ಅಲ್ಲ.
  ಉದಾ - **ಮೈತ್ರಃ ಕರುಣ ಏವ ಚ – ಮೈತ್ರಃ(ಖ್) ಕರುಣ ಏವ ಚ**

- ವಿಸರ್ಗದ ನಂತರ **'ಪ್'** ಅಥವಾ **'ಫ್'** ಅಕ್ಷರ ಬಂದರೆ, ಆ ವಿಸರ್ಗವನ್ನು **'ಫ್'** ಎಂದು ಉಚ್ಚರಿಸಬೇಕು. ಉಚ್ಚಾರಣೆಯು **'ಫ್'** ನಂತೆ ಇರಬೇಕೇ ವಿನಃ **'ಫ್'** ಅಲ್ಲ ಎಂಬುದನ್ನು ನೆನಪಿನಲ್ಲಿಡಿ.
  ಉದಾ - **ತತಃ ಪದಂ ತತ್ಪರಿಮಾರ್ಗಿತವ್ಯಮ್– ತತಃ(ಫ್) ಪದಂ ತತ್ಪರಿಮಾರ್ಗಿತವ್ಯಮ್**

- ವಿಸರ್ಗದ ನಂತರ **'ಸ್' 'ಶ್'** ಅಥವಾ **'ಷ್'** ಅಕ್ಷರ ಬಂದರೆ, ಆ ವಿಸರ್ಗದ ಉಚ್ಚಾರಣೆಯನ್ನು ಕ್ರಮವಾಗಿ **'ಸ್' 'ಶ್'** ಮತ್ತು **'ಷ್'** ಎಂದು ಮಾಡಬೇಕು.
  ಉದಾಹರಣೆ - **ಯೋ ಮದ್ಭಕ್ತಃ ಸ ಮೇ ಪ್ರಿಯಃ= ಯೋ ಮದ್ಭಕ್ತಸ್ಸ ಮೇ ಪ್ರಿಯಃ**
  **ಊರ್ಧ್ವಮೂಲಮಧಃ ಶಾಖಮ್= ಊರ್ಧ್ವಮೂಲಮಧಶ್ಶಾಖಮ್**
  **ಮನಃ ಷಷ್ಠಾನೀಂದ್ರಿಯಾಣಿ = ಮನಷ್ಷಷ್ಠಾನೀಂದ್ರಿಯಾಣಿ**

**ವಿಶೇಷ ನಿಯಮ:** ಒಂದು ವೇಳೆ ವಿಸರ್ಗದ ನಂತರ **'ಕ್ಷ'** ಅಕ್ಷರ ಬಂದರೆ ಆ ವಿಸರ್ಗದ ಉಚ್ಚಾರವು ನಿಯಮ 1 ರಂತೆ **ಹ, ಹಿ, ಹು,** ಅಥವಾ **ಹೇ** ಆಗಿರುತ್ತದೆ. ಉದಾಹರಣೆ - **ತೇಜಃ ಕ್ಷಮಾ = ತೇಜಹ ಕ್ಷಮಾ**

## ವಿಸರ್ಗ ಸಂಧಿ ನಿಯಮ-

ಭಗವದ್ಗೀತೆಯನ್ನು ನೋಡಿದಾಗ, ಇಲ್ಲಿ ಬಹುತೇಕ ಕಡೆಗಳಲ್ಲಿ ವಿಸರ್ಗದ ಉಚ್ಚಾರವು **ರ್, ಸ್, ಶ್, ಷ್** ಎಂಬುದಾಗಿ ಬದಲಾಗುವುದನ್ನು ನಾವು ಕಾಣಬಹುದು. ಈ ಬದಲಾವಣೆಯು ವಿಸರ್ಗವನ್ನು ಸಂಧಿಯನ್ನಾಗಿ ಮಾಡುವ ನಿಯಮಕ್ಕನುಸಾರವಾಗಿರುತ್ತದೆ. ಇದು ಬಹಳ ವಿಸ್ತೃತವಾಗಿರುವುದರಿಂದ ಈ ಬಗ್ಗೆ ಮುಂದಿನ ಹಂತಗಳಲ್ಲಿ ವಿವರಿಸಲಾಗುವುದು. ಈಗ ನೀವು ಈ ಪಿಡಿಎಫ್‌ನಲ್ಲಿ ವಿವರಿಸಿದ ರೀತಿಯಲ್ಲಿ ಅಭ್ಯಾಸ ಮಾಡಿ.

ಉದಾಹರಣೆ - **ಬುದ್ಧಿಃ ಯೋ – ಬುದ್ಧಿರ್ಯೋ, ಪರಯೋಃಪೆತಾಃ ತೇ – ಪರಯೋಃಪೇತಾಸ್ತೇ, ವೇದೈಃ ಚ – ವೇದೈಶ್ಚ**

**ಇಲ್ಲಿ ತಿಳಿಸುವುದೆನೆಂದರೆ, ವಿಸರ್ಗದ ನಂತರ ಮೇಲೆ ತಿಳಿಸಿದ ಅಕ್ಷರಗಳನ್ನು ಹೊರತುಪಡಿಸಿ ಬೇರೆ ಅಕ್ಷರಗಳು ಬಂದರೆ, ವಿಸರ್ಗದ ಉಚ್ಚಾರಣೆಯು ನಿಯಮ-1 ರಂತೆ, ಹ, ಹು, ಹೇ, ಹೇ ಇತ್ಯಾದಿಗಳಂತೆ ಇರುತ್ತದೆ.**

## ಅವಗ್ರಹ (ऽ) -

ಅವಗ್ರಹ 'ऽ' ಎಂಬುದು ಸಂಧಿಯಿಂದ ಉಂಟಾಗುವ "ಅ"ಕಾರವನ್ನು ಬಿಟ್ಟುಬಿಡುವುದನ್ನು ಸೂಚಿಸುವ ಸಂಕೇತವಾಗಿದೆ. ವಾಸ್ತವಿಕವಾಗಿ ಇದಕ್ಕೆ ಯಾವುದೇ ವಿಶೇಷ ಉಚ್ಚಾರಣೆಯಿರುವುದಿಲ್ಲ. ಸಂಧಿ ವಿಗ್ರಹದ ಸಮಯದಲ್ಲಿ ಯಾವುದೇ ಬದಲಾವಣೆಯಿಲ್ಲದಿದ್ದಾಗ ಮಾತ್ರ ಇದನ್ನು ಬಳಸಲಾಗುತ್ತದೆ. ಒಂದು ಪದದಲ್ಲಿ ಅವಗ್ರಹ ಚಿಹ್ನೆ (ऽ) ಇದ್ದರೆ, ಅದರ ಹಿಂದಿರುವ ಸ್ವರವನ್ನು ಎಳೆದು ಉಚ್ಚರಿಸಬೇಕು.

ಉದಾ - ಪ್ರಯಾಣಕಾಲೇ+ಅಪಿ - ಪ್ರಯಾಣಕಾ**ಲೇऽ**ಪಿ

## ಒತ್ತಕ್ಷರಗಳ (ಆಘಾತ)ಉಚ್ಚಾರಣಾ ನಿಯಮ:

- ಶ್ಲೋಕಗಳ ಯಾವುದೇ ಭಾಗದಲ್ಲಿ ಸಂಯುಕ್ತ ಅಕ್ಷರ (ಎರಡು ವ್ಯಂಜನಗಳ ಸಂಯೋಗ) ಬಂದರೆ ಅದರ ಹಿಂದೆ ಇರುವ ಸ್ವರದ ಮೇಲೆ ಒತ್ತು ಕೊಡಬೇಕು. ಅಂದರೆ, ಆ ಸಂಯುಕ್ತಾಕ್ಷರದ ಮೊದಲ ಅಕ್ಷರವನ್ನು ದ್ವಿಗುಣಗೊಳಿಸಬೇಕು (ಎರಡು ಬಾರಿ ಓದಿ). ಎಲ್ಲಿ ಆಘಾತ ಇರಬೇಕು ಎಂದುದನ್ನು ಸೂಚಿಸಲು ಪ್ರತಿ ಶ್ಲೋಕದಲ್ಲಿನ ಅಕ್ಷರಗಳ ಮೇಲೆ '||' ಚಿಹ್ನೆಯನ್ನು ನೀಡಲಾಗಿದೆ.

  **ಕ್ಷ(ಕ್+ಷ), ತ್ರ(ತ್+ರ), ಜ್ಞ(ಜ್+ಞ), ತ್ಯ(ತ್+ಯ), ವ್ಯ(ವ್+ಯ)** ಇತ್ಯಾದಿ ಸಂಯುಕ್ತಾಕ್ಷರಗಳು.

  ಉದಾಹರಣೆ - **ಮವ್ಯಕ್ತಮ್ = ಮವ್+ವ್ಯಕ್+ಕ್ತಮ್, ಮೇ ಪ್ರಿಯಃ = ಮೇಪ್+ಪ್ರಿಯಃ**
- ವ್ಯಂಜನವು ಸ್ವರದೊಂದಿಗೆ ಸಂಯೋಜನೆ ಹೊಂದಿದರೆ, ಅದು ಸಂಯುಕ್ತಾಕ್ಷರವಲ್ಲ. ಆದ್ದರಿಂದ ಇಲ್ಲಿ ಯಾವುದೇ ಆಘಾತ ಉಂಟಾಗುವುದಿಲ್ಲ. ಉದಾ - **'ಋ'** ಇದು ಒಂದು ಸ್ವರವಾಗಿದೆ, ಆದ್ದರಿಂದ **'ವಿಸೃಜಾಮ್ಯಹಮ್'** ಇಲ್ಲಿ **'ಸೃ = ಸ್+ಋ'** ಇದರಲ್ಲಿ **'ಸೃ'** ದ ಮೊದಲು **'ವಿ'** ಮೇಲೆ ಒತ್ತು ಬರುವುದಿಲ್ಲ. ಸಂಯುಕ್ತ ಅಕ್ಷರದ ಹಿಂದಿನ ಸ್ವರದ ಮೇಲೆ ಒತ್ತು ಬರುತ್ತದೆಯೇ ವಿನಃ ವ್ಯಂಜನ, ಅನುಸ್ವಾರ ಅಥವಾ ವಿಸರ್ಗದ ಮೇಲೆ ಅಲ್ಲ.

  ಉದಾ - **'ವಾಸುದೇವಂ(ವ್) ವ್ರಜಪ್ರಿಯಮ್'** ಇಲ್ಲಿ **'ವ್ರ'** ಎಂಬುದು ಸಂಯುಕ್ತ ಅಕ್ಷರವಾದರೂ ಸಹ ಅದರ ಹಿಂದೆ ಅನುಸ್ವಾರ ಇರುವ ಕಾರಣ '**ವಂ**' ಮೇಲೆ ಒತ್ತು ಬರುವುದಿಲ್ಲ.

**ಸಂಸ್ಕೃತ ಭಾಷೆಯಲ್ಲಿ, ಅಕ್ಷರಗಳ ಉಚ್ಚಾರಣೆಗೆ ಬಾಯಿಯ ವಿವಿಧ ಸ್ಥಳಗಳನ್ನು ಬಳಸಲಾಗುತ್ತದೆ. ಈ ಕೆಳಗಿನ ಚಿತ್ರದಲ್ಲಿ, ಅಕ್ಷರಗಳ ಉಚ್ಚಾರಣಾ ಸ್ಥಳಗಳನ್ನು ತೋರಿಸಲಾಗಿದೆ. ನಿಗದಿತ ಜಾಗವನ್ನು ಬಳಸುವ ಮೂಲಕ, ನಾವು ನಮ್ಮ ಉಚ್ಚಾರಣೆಗಳನ್ನು ಸಾಧ್ಯವಾದಷ್ಟು ಶುದ್ಧಗೊಳಿಸಬಹುದು. ಕೆಳಗಿನ ಚಿತ್ರದಿಂದ ವೈಜ್ಞಾನಿಕ ಮತ್ತು ಶ್ರೀಮಂತ ಸಂಸ್ಕೃತ ಭಾಷೆಯ ಬಗ್ಗೆ ತಿಳಿಯಬಹುದು.**




|| ಮುಕ್ತಾಯ ||

*ಗೀತಾ ಪರಿವಾರದ ಸಾಹಿತ್ಯದ ಉಪಯೋಗ ಬೇರೆ ಯಾವುದೇ ಸ್ಥಳದಲ್ಲಿ ಮಾಡಲು ಪೂರ್ವಾನುಮತಿ ಪಡೆಯುವ ಅವಶ್ಯಕತೆ ಇದೆ. ಪೂರ್ವಾನುಮತಿ ಪಡೆಯಲು consent@learngeeta.com ನಲ್ಲಿ ನಮಗೆ ಬರೆದು ಕಳುಹಿಸಿ.*